ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ

ಸಿ.ಸಿ.ನಂಃ **298/2023**

ಪಿರ್ಯಾದುದಾರರುಃ ಆರೋಪಿತರುಃ

ಗ್ರಾಮಂತರ ಪೋಲೀಸ್ ಠಾಣೆ ಯಕುಶ್ ಮಿಯಾ ಮತ್ತು ಇತರರು

ಶ್ರೀಮತಿ ವಿ.ಎನ್.ಮಿಲನ ಬಿ.ಎ.,ಎಲ್., ಎಲ್.ಎಲ್.ಬಿ., ಭದ್ರಾವತಿಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮ ಅಂದರೆಃ

1. ಯಕುಶ್ ಮಿಯಾ ಅಲಿಯಾಸ್ ಯಕುಬ್ ಮಿಯಾ,
   ಬಿನ್ ಸೈಯದ್ ಇಸಾಕ್, 40 ವರ್ಷ,
2. ದಾದಾಮಿಯಾ ಅಲಿಯಾಸ್ ಸೈಯದ್ ಇಸಾಕ್ ,
   ಬಿನ್ ಸಾಷಾಮಿಯಾ, **70** ವರ್ಷ,
3. ಜಿಲನಿ ಅಲಿಯಾಸ್ ಸೈಯದ್ ಅಬ್ದುಲ್ ಖಾದರ್,
   ಬಿನ್ ಸೈಯದ್ ಅಸ್ರಫ್ , **38** ವರ್ಷ,
4. ಸೈಯದ್ ಮೊಹಮ್ಮದ್ ಅಲಿಯಾಸ್ ಮೊಹಮ್ಮದ್,
   ಬಿನ್ ಸೈಯದ್ ಅಲಿ, **32** ವರ್ಷ,
5. ಸೈಯದ್ ಅಲಿ ಬಿನ್ ಸಾಷಾಮಿಯಾ, **65** ವರ್ಷ,
   ಎಲ್ಲರ ವಾಸಃ ತಡಸ ಗ್ರಾಮ, ಭದ್ರಾವತಿ ತಾಲ್ಲೂಕು.

ಮೇಲೆ ಈ ಕೆಳಕಂಡಂತೆ ಆರೋಪ ಹೊರಿಸುತ್ತೇನೆಃ

## ದೋಷಾರೋಪಣೆ

ದಿಃ 01.11.2022 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಭದ್ರಾವತಿ ತಾಲ್ಲೂಕು ತಡಸಾ ಗ್ರಾಮದಲ್ಲಿರುವ ಸ. ನಂ. 44 ರ ತಮ್ಮ ಜಮೀನಿಗೆ ಸಾಕ್ಷಿ-1 ರವರು ಹೋದಾಗ ಜಮೀನಿನ ಬಳಿ ಹರಿದು ಹೋಗಿರುವ ಭದ್ರಾ ನದಿಯ ಪಶ್ಚಿಮ ದಂಡೆಯ ಖಾಲಿ ಜಾಗದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಾಕ್ಷಿ-1 ರವರ ಜಮೀನಿಗೆ ಹೊಂದಿಕೊಂಡಂತೆ ಇರುವ ಭದ್ರಾ ಬಲದಂಡೆಯಲ್ಲಿ ಬದು ಹಾಕುತ್ತಿದ್ದು, ಸಾಕ್ಷಿ-1 ರವರು ನಿಮ್ಮನ್ನು ಕುರಿತು ನಮ್ಮ ಜಮೀನಿಗೇ ಏಕೆ ಬದು ಹಾಕುತ್ತಿದ್ದೀರಾ ಎಂದು ಕೇಳಿದಕ್ಕೆ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸ್ವ ಪ್ರೇರಣೆಯಿಂದ

ಸಾಕ್ಷಿ-1 ರವರಿಗೆ ನೀನು ಏನು ಕೇಳುವುದು ಸೂಳೆಮಗನೆ ನಿಮ್ಮಪ್ಪನದಾ ಜಮೀನು ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ಸಾರ್ವಜನಿಕರ ಶಾಂತಿಗೆ ಕುಂದು ಉಂಟಾಗುವ ರೀತಿಯಾಗಿ ನಡೆದುಕೊಂಡಿರುತ್ತೀರಿ. ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

2 ನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ಸಮಾನ ಉದ್ದೇಶ ಹೊಂದಿ ಸ್ವ ಪ್ರೇರಣೆಯಿಂದ 3 ನೇ ಆರೋಪಿಯಾದ ನೀವು ಗುದ್ದಲಿಯಿಂದ ಸಾಕ್ಷಿ-1 ರವರ ತಲೆಯ ಹಿಂಭಾಗಕ್ಕೆ ಹಾಗು ಸಾಕ್ಷಿ-2 ರವರ ತಲೆ , ಎಡಗೈಗೆ ಹೊಡೆದಿದ್ದು, ಜಗಳ ಬಿಡಿಸಲು ಬಂದ ಸಾಕ್ಷಿ-3 ರವರಿಗೂ ಸಹ ಗುದ್ದಲಿಯಿಂದ ತಲೆಯ ನೆತ್ತಿಯ ಭಾಗಕ್ಕೆ ಹೊಡೆದಿದ್ದು, 4 ನೇ ಆರೋಪಿಯಾದ ನೀವು ಗುದ್ದಲಿಯಿಂದ ಸಾಕ್ಷಿ-1 ರವರ ಎಡಗೈ ಮತ್ತು ಬಲ ಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯ ಪಡಿಸಿರುತ್ತೀರಿ. ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

3 ನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸ್ವ ಪ್ರೇರಣೆಯಿಂದ ಸಾಕ್ಷಿ-1 ರಿಂದ 3 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು, ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯ ಪಡಿಸಿರುತ್ತೀರಿ. ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸ್ವಪ್ರೇರಣೆಯಿಂದ ಸಾಕ್ಷಿ-1 ರಿಂದ 3 ರವರಿಗೆ ನೀವು ಈ ದಿವಸ ಉಳಿದುಕೊಂಡಿದ್ದೀರಾ ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಭಾರತೀಯ

ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ದಿನಾಂಕ 4 ನೇ ಆಗಸ್ಟ್ ಮಾಹೆ 2023 ನೇ ಇಸವಿ.

(ವಿ.ಎನ್.ಮಿಲನ)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು, ಭದ್ರಾವತಿ.

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭದ್ರಾವತಿ.

ಸಿ.ಸಿ. ಸಂ. **298/2023**

ಪಿರ್ಯಾದಿಃ ವಿರುದ್ಧ ಆರೋಪಿಃ

ಗ್ರಾಮಾಂತರ ಪೋಲೀಸ್ ಠಾಣೆ, ಭದ್ರಾವತಿ.

**1. ಯಕುಶ್ ಮಿಯಾ ಅಲಿಯಾಸ್ ಯಕುಬ್ ಮಿಯಾ,**

ಆರೋಪಿಯ ಹೇಳಿಕೆ

ಪ್ರಶ್ನೆ 1: ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ 2: ಆಪಾದನೆಯನ್ನು ಒಪ್ಪುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?

ಉತ್ತರಃ

ದಿನಾಂಕ 4 ನೇ ಆಗಸ್ಟ್ 2023 ನೇ ಇಸವಿ.

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಭದ್ರಾವತಿ.

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭದ್ರಾವತಿ.

ಸಿ.ಸಿ. ಸಂ. **298/2023**

ಪಿರ್ಯಾದಿಃ ವಿರುದ್ಧ ಆರೋಪಿಃ

ಗ್ರಾಮಾಂತರ ಪೋಲೀಸ್ ಠಾಣೆ, ಭದ್ರಾವತಿ.

**2.** ದಾದಾಮಿಯಾ ಅಲಿಯಾಸ್ ಸೈಯದ್ ಇಸಾಕ್ ,

ಆರೋಪಿಯ ಹೇಳಿಕೆ

ಪ್ರಶ್ನೆ 1: ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?
ಉತ್ತರಃ ತಿಳಿಯಿತು.

ಪ್ರಶ್ನೆ 2: ಆಪಾದನೆಯನ್ನು ಒಪ್ಪುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?
ಉತ್ತರಃ

ದಿನಾಂಕ 4 ನೇ ಆಗಸ್ಟ್ 2023 ನೇ ಇಸವಿ.

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಭದ್ರಾವತಿ.

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭದ್ರಾವತಿ.

ಸಿ.ಸಿ. ಸಂ. **298/2023**

ಪಿರ್ಯಾದಿಃ ವಿರುದ್ಧ ಆರೋಪಿಃ

ಗ್ರಾಮಾಂತರ ಪೋಲೀಸ್ ಠಾಣೆ, **3.** ಜಿಲನಿ ಅಲಿಯಾಸಿ ಸೈಯದ್ ಅಬ್ದುಲ್ ಖಾದರ್

ಭದ್ರಾವತಿ.

ಆರೋಪಿಯ ಹೇಳಿಕೆ

ಪ್ರಶ್ನೆ 1: ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?
ಉತ್ತರಃ ತಿಳಿಯಿತು.

ಪ್ರಶ್ನೆ 2: ಆಪಾದನೆಯನ್ನು ಒಪ್ಪುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?

ಉತ್ತರಃ

ದಿನಾಂಕ 4 ನೇ ಆಗಸ್ಟ್ 2023 ನೇ ಇಸವಿ.

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.. ದಂಡಾಧಿಕಾರಿಗಳು, ಭದ್ರಾವತಿ.

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭದ್ರಾವತಿ.

ಸಿ.ಸಿ. ಸಂ. **298/2023**

ಪಿರ್ಯಾದಿಃ ವಿರುದ್ಧ ಆರೋಪಿಃ

ಗ್ರಾಮಾಂತರ ಪೋಲೀಸ್ ಠಾಣೆ, **4.** ಸೈಯದ್ ಮೊಹಮ್ಮದ್ ಅಲಿಯಾಸ್ ಮೊಹಮ್ಮದ್

ಭದ್ರಾವತಿ.

ಆರೋಪಿಯ ಹೇಳಿಕೆ

ಪ್ರಶ್ನೆ 1: ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?
ಉತ್ತರಃ ತಿಳಿಯಿತು.

ಪ್ರಶ್ನೆ 2: ಆಪಾದನೆಯನ್ನು ಒಪ್ಪುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?
ಉತ್ತರಃ

ದಿನಾಂಕ 4 ನೇ ಆಗಸ್ಟ್ 2023 ನೇ ಇಸವಿ.

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.. ದಂಡಾಧಿಕಾರಿಗಳು, ಭದ್ರಾವತಿ.

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭದ್ರಾವತಿ.

ಸಿ.ಸಿ. ಸಂ. **298/2023**

| ಪಿರ್ಯಾದಿಃ | ವಿರುದ್ಧ | ಆರೋಪಿಃ |
|---|---|---|
| ಗ್ರಾಮಾಂತರ ಪೋಲೀಸ್ ಠಾಣೆ, ಭದ್ರಾವತಿ. | | **5.** ಸೈಯದ್ ಅಲಿ |

ಆರೋಪಿಯ ಹೇಳಿಕೆ

ಪ್ರಶ್ನೆ 1: ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ 2: ಆಪಾದನೆಯನ್ನು ಒಪ್ಪುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?

ಉತ್ತರಃ

ದಿನಾಂಕ 4 ನೇ ಆಗಸ್ಟ್ 2023 ನೇ ಇಸವಿ.

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.. ದಂಡಾಧಿಕಾರಿಗಳು, ಭದ್ರಾವತಿ.